INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -5, September--October, 2024,
PageNo,18-26
Peer -Reviewed, Refereed Journal

# ವಸಾಹತುಶಾಹಿ ಮೈಸೂರು ಸಂಸ್ಥಾನದಲ್ಲಿ ಬೆಲ್ಲ ಮತ್ತು ಸಕ್ಕರೆ ಕೈಗಾರಿಕೆಗಳು: ಅದರ ಉತ್ಪಾದನೆ, ಮಾರಾಟ ಮತ್ತು ನೀತಿಗಳು (ಪ್ರ.ಶ. 1831–1881)

ಸವಿತ. ಕೆ. ಕೆ.[1]

**ಸಾರಾಂಶ–***ವಸಾಹತುಶಾಹಿ ಮೈಸೂರು ಸಂಸ್ಥಾನದಲ್ಲಿ ಕಮೀಷನರುಗಳ ಆಳ್ವಿಕೆಯ ಕಾಲದಲ್ಲಿ (ಪ್ರ.ಶ. 1831–1881) ಕಬ್ಬಿನಿಂದ ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದು ಇದು ಒಂದು ಸಣ್ಣ ಉದ್ಯಮವಾಗಿ ಸಂಸ್ಥಾನದಾದ್ಯಂತ ಕಂಡುಬಂದಿವೆ. ಇದರಿಂದ ರಾಜ್ಯಕ್ಕೆ ಆದಾಯ ಮತ್ತು ಕೆಲವು ಕೃಷಿಕರಿಗೆ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿತ್ತು. ಬ್ರಿಟಿಷರ ಆಗಮನದಿಂದ ಮೈಸೂರಿನಲ್ಲಿ ಸಾಂಪ್ರದಾಯಿಕವಾಗಿ ಬೆಳೆಯುತ್ತಿದ್ದ ಕಬ್ಬಿನ ಜೊತೆಗೆ ಹೊಸ ಕಬ್ಬಿನ ತಳಿಗಳನ್ನು ಪರಿಚಯಿಸಿ ಬೆಲ್ಲ ಮತ್ತು ಸಕ್ಕರೆ ಉದ್ಯಮವನ್ನು ಅಭಿವೃದ್ಧಿಪಡಿಸಲಾಯಿತು. ಆದಾಯ, ಬ್ರಿಟಿಷರ ವಸಾಹತುನೀತಿ ಮತ್ತು ಸಂಸ್ಥಾನದಲ್ಲಿದ್ದ ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ, ತೆರಿಗೆ, ಮಾರಾಟ ಮತ್ತು ನೀತಿಗಳನ್ನು ಈ ಸಂಶೋಧನಾ ಲೇಖನದಲ್ಲಿ ಚರ್ಚಿಸಲಾಗಿದೆ.*

**ಕೀ ವರ್ಡ್‌ಗಳು :** *ಮೈಸೂರು ಸಂಸ್ಥಾನ, ವಸಾಹತುಶಾಹಿ, ಕಬ್ಬು, ಬೆಲ್ಲ, ಸಕ್ಕರೆ, ಅಷ್ಟಗ್ರಾಮ ಶುಗರ್ ವರ್ಕ್ಸ್, ಮಾರ್ಕ್ಸ್ ಕಬ್ಬನ್, ವಿಶ್ವ ವಸ್ತು ಪ್ರದರ್ಶನ.*

ವಸಾಹತುಶಾಹಿ ಮೈಸೂರು ಸಂಸ್ಥಾನದ ಆರ್ಥಿಕ ವ್ಯವಸ್ಥೆ ಮತ್ತು ಕೈಗಾರಿಕಾ ಸ್ವರೂಪದಲ್ಲಿ ಬೆಲ್ಲ ಮತ್ತು ಸಕ್ಕರೆಗೆ ಮಹತ್ವದ ಸ್ಥಾನವಿದೆ. ಬೆಲ್ಲ ಮತ್ತು ಸಕ್ಕರೆಯ ಕೈಗಾರಿಕೆಗಳು ಒಂದು ವ್ಯವಸ್ಥಿತ ಮತ್ತು ಅತ್ಯುತ್ತಮ ಕೃಷಿ ಆಧಾರಿತ ಕೈಗಾರಿಕೆಗಳಾಗಿವೆ. ಬೆಲ್ಲವು ಕಬ್ಬಿನ ಉತ್ಪನ್ನವಾಗಿದೆ ಮತ್ತು ಸಕ್ಕರೆಯು ಅದರ ಉತ್ತಮ ಮೂಲವಾಗಿದೆ. ಕಬ್ಬನ್ನು ಹಿಂಡಿ ರಸವನ್ನು ತೆಗೆದು ಅದನ್ನು ಬೇಯಿಸಿ ಬೆಲ್ಲ ಮತ್ತು ಸಕ್ಕರೆಯನ್ನು ತಯಾರಿಸಲಾಗುತ್ತಿತ್ತು. ಬೆಲ್ಲವನ್ನು ಸಾಂಪ್ರದಾಯಿಕವಾಗಿ ಸಾಂದ್ರೀಕೃತ ಕಬ್ಬಿನ ರಸದಿಂದ ತಯಾರಿಸಲಾಗುತ್ತದೆ. ಕಬ್ಬಿನ ರಸವನ್ನು ಕುದಿಸಲಾಗುತ್ತದೆ, ನಂತರ ಅದನ್ನು ನಿರ್ದಿಷ್ಟ ಆಕಾರದಲ್ಲಿ

[1].ಸಂಶೋಧನಾ ವಿದ್ಯಾರ್ಥಿ,ಇತಿಹಾಸ ಅಧ್ಯಯನ ವಿಭಾಗ,ಮಾನಸಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು

ಅಚ್ಚುಗಳಲ್ಲಿ ಸುರಿದು ಘನೀಕರಿಸಲಾಗುತ್ತದೆ. ಬೆಲ್ಲವನ್ನು ಕಬ್ಬಿನ ರಸವನ್ನು ಶುದ್ಧೀಕರಿಸಲು (ಫಿಲ್ಟರ್) ಸುಣ್ಣವನ್ನು ಮಿಶ್ರಣ ಮಾಡಲಾಗುತ್ತಿತ್ತು. ಸಕ್ಕರೆಯನ್ನು ಕಬ್ಬಿನ ರಸದ ಶುದ್ಧೀಕರಣ ಮಾಡಿ ಕಾಕಂಬಿ ಮತ್ತು ಕಲ್ಮಶಗಳನ್ನು ಹೊರತೆಗೆದು, ಸುಕ್ರೋಸ್ ಅನ್ನು ಸ್ಫಟಿಕೀಕರಣ ಪ್ರಕ್ರಿಯೆಯ ಮೂಲಕ ಸಂಸ್ಕರಿಸಿದಾಗ ಬಿಳಿ ಸಕ್ಕರೆ ಉತ್ಪಾದನೆಯಾಗುತ್ತದೆ.

ವಸಾಹತುಶಾಹಿ ಮೈಸೂರು ಸಂಸ್ಥಾನದಲ್ಲಿ ಪ್ರಧಾನ ಕೈಗಾರಿಕೆಗಳ ಜೊತೆಯಲ್ಲಿಯೇ ಸಣ್ಣ ಪುಟ್ಟ ಬೆಲ್ಲ ಮತ್ತು ಸಕ್ಕರೆ ಕೈಗಾರಿಕೆಗಳು ಅಸ್ಥಿತ್ವದಲ್ಲಿದ್ದವು. ಅವುಗಳಲ್ಲಿ ಸಾಕಷ್ಟು ಜನತೆ ತೊಡಗಿಕೊಂಡಿದ್ದು ತಮ್ಮ ಜೀವನವನ್ನು ನಡೆಸುತ್ತಿದ್ದರು. ಇವು ಸಣ್ಣ ಪ್ರಮಾಣದಲ್ಲಿದ್ದು ಸಂಸ್ಥಾನದಲ್ಲಿ ವ್ಯಾಪಕವಾಗಿ ಹರಡಿದ್ದಿತು. ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ ಮಾಡುವ ಕುಶಲ ಕಲೆಯು ಸಂಸ್ಥಾನದ ಎಲ್ಲಾ ಕಡೆಗೆ ಹರಡಿರುತ್ತದೆ. ಇವುಗಳನ್ನು ತಯಾರಿಸುವ ಸ್ಥಳವನ್ನು ಆಲೆಮನೆ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಆಲೆಮನೆಗಳು ನಲ್ವತ್ತು ಅಡಿ ಉದ್ದ ಮತ್ತು ಇಪ್ಪತ್ತು ಅಡಿ ಅಗಲವಿರುತ್ತದೆ. ಹಗಲು–ರಾತ್ರಿ ಆಲೆಮನೆಯಲ್ಲಿ ಕೆಲಸ ನಡೆಯುತ್ತಿದ್ದಿತು. ಹದಿನಾಲ್ಕು ಎತ್ತುಗಳ ಶ್ರಮವನ್ನು ಬಳಸಿ ಏಳು ಸಾವಿರ ಕಬ್ಬಿನ ಜಲ್ಲೆಗಳನ್ನು ಅರೆದರೆ ಹದಿನಾಲ್ಕು ಮಣ ಬೆಲ್ಲ ಅಥವಾ ಏಳು ಮಣ ಸಕ್ಕರೆ ಸಿಗುತ್ತಿತ್ತು. ಆಲೆಮನೆಯ ಕೆಲಸ ಬಹು ತ್ರಾಸದಾಯಕವಾಗಿತ್ತು. ಆ ಕಾಲದಲ್ಲಿ ಕಬ್ಬಿಣದ ಆಲೆ ಯಂತ್ರವು ಬಳಕೆಗೆ ಬಂದಿತು. ಇದು ಯೂರೋಪಿಯನ್ನರ ಕೊಡುಗೆಯಾಗಿತ್ತು. ಕಬ್ಬಿನ ರಸವನ್ನು ಚೊಕ್ಕಟವಾಗಿ ಇದರಿಂದ ತೆಗೆಯಬಹುದಾಗಿತ್ತು.[1] ಕಬ್ಬಿಣದ ಯಂತ್ರದ ಬಳಕೆಗೆ ಮೊದಲು ಕಲ್ಲು ಮತ್ತು ಮರದ ಗಾಣಗಳಿಂದ ಕಬ್ಬನ್ನು ಅರೆದು ರಸ ತೆಗೆಯಲಾಗುತ್ತಿತ್ತು.

ಪ್ರ.ಶ. 1831ರಲ್ಲಿ ಬ್ರಿಟಿಷರು ಮೈಸೂರು ಸಂಸ್ಥಾನವನ್ನು ನೇರ ಆಳ್ವಿಕೆಗೆ ಒಳಪಡಿಸಿಕೊಂಡು ಕಮೀಷನರುಗಳು ಆಳ್ವಿಕೆಯ ಪ್ರಾರಂಭದ ದಶಕದಲ್ಲಿ ಬೆಲ್ಲ ಮತ್ತು ಸಕ್ಕರೆ ಉದ್ಯಮವು ಉತ್ತಮವಾಗಿದ್ದು, ಉತ್ಪಾದನೆಯ ಸರಕುಗಳನ್ನು ಮದ್ರಾಸ್ ಪ್ರಾಂತ್ಯದ ಮಾರುಕಟ್ಟೆಗಳಿಗೆ ರಫ್ತು ಮಾಡಲಾಗುತ್ತಿತ್ತು. ಮದ್ರಾಸ್ ಪ್ರಾಂತ್ಯದಲ್ಲಿ ಬ್ರಿಟಿಷರು ಜಾರಿಗೆ ತಂದ ಕೆಲವು ಶಾಸನಗಳು ಮೈಸೂರು ಸಂಸ್ಥಾನದಲ್ಲಿ ಬೆಲ್ಲ ಮತ್ತು ಸಕ್ಕರೆ ಉದ್ಯಮವನ್ನು ಕ್ಷಿಣಿಸಿತು. ಶಾಮರಾವ್ ಹೇಳುವಂತೆ: 1843 ರಲ್ಲಿ ಮೈಸೂರಿನ ಆದಾಯವು ದೊಡ್ಡ ಹಾನಿಗೆ ಒಳಗಾಯಿತು. ಏಕೆಂದರೆ 1839ರ ಕಾಯಿದೆ XV ಮತ್ತು 1842ರ ಕಾಯಿದೆ XI ಇವು ಮದ್ರಾಸ್ ಪ್ರಾಂತ್ಯಗಳಿಗೆ ವಿದೇಶಿ ಸಕ್ಕರೆ ಆಮದುಗಳನ್ನು ನಿಷೇಧಿಸಿತು. ಮದ್ರಾಸ್ ಪ್ರಾಂತ್ಯಕ್ಕೆ ಮೈಸೂರಿನಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದುದರ ವಿರುದ್ಧವಾಗಿ ಈ ಕಾನೂನನ್ನು ಜಾರಿಗೊಳಿಸಲಾಯಿತು. ಕಾರಣ ಮೈಸೂರು ಸಂಸ್ಥಾನವು ಮದ್ರಾಸ್ ಪ್ರಾಂತ್ಯಕ್ಕೆ ವಿದೇಶಿ ಪ್ರದೇಶವಾಗಿತ್ತು. ವಾಸ್ತವವಾಗಿ ಮದ್ರಾಸ್ ಪ್ರಾಂತ್ಯದಲ್ಲಿ ಮೈಸೂರಿನಲ್ಲಿ ಉತ್ಪಾದನೆಯಾದ ಯಾವುದೇ ಸಕ್ಕರೆ ಇರುವಂತಿರಲ್ಲಿಲ್ಲ ಹಾಗೂ ಪಕ್ಕದ ಕೆನರಾ(ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು) ಜಿಲ್ಲೆಯಲ್ಲಿಯೂ ಸಹ

ಸ್ಥಳೀಯರು ಬಳಕೆಯನ್ನೂ ನಿಷೇಧಿಸಿ ಎಂದು ತೀರ್ಪು ನೀಡಲಾಗಿತ್ತು. ಮದ್ರಾಸ್ ಪ್ರಾಂತ್ಯ ಮತ್ತು ಕೆನರಾ ಜಿಲ್ಲೆಗಳಲ್ಲಿ ಬ್ರಿಟಿಷರ ಒಡೆತನದ ಸಕ್ಕರೆ ಉತ್ಪಾದನೆಯನ್ನು ಹೆಚ್ಚಿಸಿ, ಅವುಗಳಿಗೆ ಮಾರುಕಟ್ಟೆಯನ್ನು ಖಚಿತಪಡಿಸಿಕೊಳ್ಳಲು ಈ ಕಾಯಿದೆಗಳನ್ನು ವಿಧಿಸಲಾಯಿತು.[2]

ಮೈಸೂರಿನ ಮುಖ್ಯ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಪ್ರೋತ್ಸಾಹದಿಂದ ಸಂಸ್ಥಾನದ ಬೆಲ್ಲ ಮತ್ತು ಸಕ್ಕರೆಯ ಉತ್ಪಾದನೆಯು ಹೆಚ್ಚಳವಾಯಿತು. 1837ರಲ್ಲಿ 1,80,000 ಪೌಂಡ್ ತೂಕದಷ್ಟಿದ್ದ ಬೆಲ್ಲ ಮತ್ತು ಸಕ್ಕರೆ ಉತ್ಪಾದನೆಯು 1842ರ ವೇಳೆಗೆ 3,00,000 ಪೌಂಡ್‌ಗಳಿಗೆ ಏರಿತು. ಇಲ್ಲಿನ ಬೆಲ್ಲ ಮತ್ತು ಸಕ್ಕರೆಯನ್ನು ನೀಲಿಗಿರಿ(ಊಟಿ) ಮತ್ತು ಪಶ್ಚಿಮ ಕರಾವಳಿಯಲ್ಲಿದ್ದ ಸೈನಿಕ ಕೇಂದ್ರಗಳು ಹೆಚ್ಚು ಕೊಂಡುಕೊಳ್ಳುತ್ತಿದ್ದವು. 1844ರ ನಂತರ ಮೈಸೂರು ಸಂಸ್ಥಾನದಲ್ಲಿ ಕಬ್ಬಿನ ಬೆಳೆ ಹೆಚ್ಚಳವಾಯಿತು. ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಕಬ್ಬಿನ ಬೆಳೆಯನ್ನು ಶಿವಮೊಗ್ಗ, ಹಾಸನ, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯಲಾಗುತ್ತಿತ್ತು.[3]

ಮೈಸೂರು ಸಂಸ್ಥಾನದಲ್ಲಿ ಕಬ್ಬಿನ ಕೃಷಿಯು ಕೆಳಕಂಡಂತಿದೆ.[4]

| ಕ್ರ.ಸಂ | ಜಿಲ್ಲೆಗಳು | ಕಬ್ಬಿನ ಕೃಷಿ (ಎಕರೆಗಳಲ್ಲಿ) |
|---|---|---|
| 1 | ಬೆಂಗಳೂರು | 2,169 |
| 2 | ಕೋಲಾರ | 7,492 |
| 3 | ತುಮಕೂರು | 961 |
| 4 | ಮೈಸೂರು | 4,809 |
| 5 | ಹಾಸನ | 7,043 |
| 6 | ಶಿವಮೊಗ್ಗ | 7,920 |
| 7 | ಕಡೂರು | 765 |
| 8 | ಚಿತ್ರದುರ್ಗ | 774 |
| | **ಒಟ್ಟು** | **31,933** |

1854ರಲ್ಲಿ ಒಂದು ಎಕರೆ ಜಮೀನಿನಲ್ಲಿ ಉತ್ಪಾದನೆಯಾಗುತ್ತಿದ್ದ ಕಬ್ಬಿನ ಬೆಳೆಯ ವಿವರ ಕೆಳಕಂಡಂತಿದೆ.[5]

1. ಒಂದು ಎಕರೆ ಕಬ್ಬಿನಿಂದ ಬೆಲ್ಲದ ಉತ್ಪಾದನೆ ಮಾಡಿ ಮಾರಾಟ ಮಾಡಿದರೆ ಬರುತ್ತಿದ್ದ ಆದಾಯ 259 ರೂಪಾಯಿ, 13 ಆಣೆ, 7 ಪೈಸಾ.
2. ಒಂದು ಎಕರೆ ಕಬ್ಬಿನಿಂದ ಸಕ್ಕರೆ ಉತ್ಪಾದನೆ ಮಾಡಿ ಮಾರಾಟ ಮಾಡಿದರೆ ಬರುತ್ತಿದ್ದ ಆದಾಯ 305 ರೂಪಾಯಿ, 3 ಆಣೆ, 7 ಪೈಸಾ.

ಮಾರ್ಕ್ ಕಬ್ಬನ್ ಕಬ್ಬು ಬೆಳೆಯಲು ಉತ್ತೇಜನ ನೀಡಿದನು ಮತ್ತು ಶ್ರೀರಂಗಪಟ್ಟಣದಲ್ಲಿ ವೈಜ್ಞಾನಿಕ ತತ್ವಗಳ ಮೇಲೆ ಕಾರ್ಖಾನೆಯೊಂದನ್ನು ಸ್ಥಾಪಿಸಲಾಯಿತು. ಅವರ ಬೆಂಬಲದಿಂದ "ಅಷ್ಟಗ್ರಾಮ್ ಶುಗರ್ ವರ್ಕ್ಸ್" 1847ರಲ್ಲಿ ಶ್ರೀರಂಗಪಟ್ಟಣದ ಬಳಿ ಇರುವ ಪಾಲಹಳ್ಳಿಯಲ್ಲಿ ಸ್ಥಾಪನೆಗೊಂಡಿತು. ಮಾರ್ಕ್ ಕಬ್ಬನ್ ಸಕ್ಕರೆ ತಯಾರಿಸುವ ಆಧುನಿಕ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದನು. "ಅಷ್ಟಗ್ರಾಮ್ ಶುಗರ್ ವರ್ಕ್ಸ್" ಮೈಸೂರು ಸಂಸ್ಥಾನದ ಹಳೆಯ ಕೈಗಾರಿಕೆಗಳಲ್ಲಿ ಒಂದಾಗಿದ್ದು, ಈ ಕೈಗಾರಿಕೆಯ ಸುತ್ತಮುತ್ತಲ ಕೃಷಿ ಭೂಮಿ ಅಭಿವೃದ್ಧಿಗೊಳ್ಳುವಂತೆ ಮಾಡಿದುದೇ ಅಲ್ಲದೇ ಕೃಷಿಕರಿಗೆ ಅನುಕೂಲ ಮಾಡಿಕೊಟ್ಟಿತು. ಶ್ರೀರಂಗಪಟ್ಟಣ ಅದರ ಅಕ್ಕಪಕ್ಕದ ತಾಲೂಕಿನ ರೈತರು ತಾವು ಬೆಳೆದ ಕಬ್ಬನ್ನು ಬೆಲ್ಲ ತಯಾರಿಸಲು ಕೊಡದೆ ನೇರವಾಗಿ ಸಕ್ಕರೆ ತಯಾರಿಸುವ ಬೆಲ್ಲವನ್ನು "ಅಷ್ಟಗ್ರಾಮ್ ಶುಗರ್ ವರ್ಕ್ಸ್" ಕಾರ್ಖಾನೆಗೆ ಸರಬರಾಜು ಮಾಡಲು ಪ್ರಾರಂಭಿಸಿದರು. ಇದರಿಂದ ಕಬ್ಬಿನ ಕೃಷಿ ಉತ್ಪನ್ನದ ಈ ಭಾಗದಲ್ಲಿ ಅಭಿವೃದ್ಧಿ ನಡೆದು ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಯಿತು.[6] ಬೆಲ್ಲ ಮತ್ತು ಸಕ್ಕರೆ ಉತ್ಪಾದನೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು ಸಂಸ್ಥಾನದ ಆರ್ಥಿಕ ವ್ಯವಸ್ಥೆಗೆ ವೈವಿದ್ಯತೆಯನ್ನು ತಂದುಕೊಡುವುದರ ಜೊತೆಗೆ ಅನೇಕರಿಗೆ ಜೀವನಮಾರ್ಗವನ್ನು ಕಲ್ಪಿಸಿಕೊಟ್ಟಿದ್ದವು. ಸಂಸ್ಥಾನದಲ್ಲಿ ದೊಡ್ಡ ಪ್ರಮಾಣದ ಕಬ್ಬಿನ ಕೃಷಿ ಮತ್ತು ಸಕ್ಕರೆಯ ಉತ್ಪಾದನೆಯೊಂದಿಗೆ ಭೂಮಿಯು ಹೊಸ ಬಂಡವಾಳಶಾಹಿ ವರ್ಗವು ಬೆಳೆಯಲು ಕಾರಣವಾಯಿತು ಎಂದು ಸ್ನಿಚೆರೋವ್‌ನಂತಹ ಕೆಲವು ವಿದ್ವಾಂಸರು ತೀರ್ಮಾನಿಸಿದರು.[7]

ಮೈಸೂರು ಸಂಸ್ಥಾನದಲ್ಲಿ ವಿವಿಧ ಮಾದರಿಯ ಕಬ್ಬಿನ ತಳಿಗಳನ್ನು ಪರಿಚಯಿಸಿ ಕೃಷಿ ಮಾಡಲಾಗುತ್ತಿತ್ತು. ಚೀನಾ, ಮಾರಿಷಸ್ ಮತ್ತು ದಕ್ಷಿಣ ಸಿಯಾಸ್ ನಿಂದ ಕಬ್ಬಿನ ತಳಿಗಳನ್ನು ತಂದು ಸಂಸ್ಥಾನದಲ್ಲಿ ಪರಿಚಯಿಸಲಾಯಿತು. ಈ ತಳಿಗಳ ಹೆಚ್ಚು ಬೆಳೆಯನ್ನು ಉತ್ಪತ್ತಿ ಮಾಡುತ್ತಿದ್ದವು. ಸಂಸ್ಥಾನದಲ್ಲಿ ಕಬ್ಬಿನಿಂದ ಸಕ್ಕರೆ ಮತ್ತು ಸಕ್ಕರೆ ಅಚ್ಚುಗಳನ್ನು ತಯಾರಿಸಲಾಗುತ್ತಿತ್ತು.[8] ಶ್ರೀರಂಗಪಟ್ಟಣದಲ್ಲಿದ್ದ ಸಕ್ಕರೆ ಕಂಪನಿಯಲ್ಲಿ 10 ಜನ ಐರೋಪ್ಯರು, 300 ಜನ ದೇಶಿಯರು ಕೆಲಸ ಮಾಡುತ್ತಿದ್ದರು. ಮುಂದೆ ಈ ಕಂಪನಿ ಜಾಯಿಂಟ್ ಸ್ಟಾಕ್ ಕಂಪನಿಯಾಗಿ ಪರಿವರ್ತನೆಗೊಂಡಿತು. ಅಷ್ಟಗ್ರಾಮ್ ಷುಗರ್ ವರ್ಕ್ಸ್ ಕಾರ್ಖಾನೆಯಲ್ಲಿ ಉತ್ಪಾದಿಸುತ್ತಿದ್ದ ಅತ್ಯುತ್ತಮ ಗುಣಮಟ್ಟದ ಹರಳು ಸಕ್ಕರೆ ಪ್ರಪಂಚದಾದ್ಯಂತ ಪ್ರಖ್ಯಾತಿ

ಹೊಂದಿದ್ದಿತು. ಅತ್ಯುತ್ತಮ ಮಟ್ಟದ ಹರಳು ಸಕ್ಕರೆಯನ್ನು ತಯಾರಿಸುತ್ತಿದ್ದಕ್ಕಾಗಿ 1851 ಮತ್ತು 1861ರಲ್ಲಿ ಲಂಡನ್‌ನಲ್ಲಿ ನಡೆದ ಬೃಹತ್ 'ವಸ್ತುಪ್ರದರ್ಶನ'ದಲ್ಲಿ ಬಹುಮಾನ ಮತ್ತು ಪದಕವನ್ನು ಪಡೆದುಕೊಂಡಿತು. ಅದೇ ರೀತಿ 1867ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಟ್ಟದ 'ವಿಶ್ವ ವಸ್ತು ಪ್ರದರ್ಶನ'ದಲಿ ಈ ಕಾರ್ಖಾನೆಗೆ ಗೌರವ ಪ್ರಶಸ್ತಿ ದೊರೆಕಿತು. ಇಲ್ಲಿ ತಯಾರಾದ ಸಕ್ಕರೆಗೆ ಪ್ರಥಮ ಬಹುಮಾನವನ್ನು ಕೊಡಲಾಯಿತು.[9] ಈ ಹೆಗ್ಗಳಿಕೆ ಇದ್ದರೂ ಭಟ್ಟಿ ಇಳಿಸುವ ಪರವಾನಗಿ ದೊರಕಿದ್ದರೂ ದುರದೃಷ್ಟವಶಾತ್ ಈ ಕಾರ್ಖಾನೆಯು 1894ರಲ್ಲಿ ಕಾರಣಾಂತರದಿಂದ ಮುಚ್ಚಲ್ಪಟ್ಟಿತು. ಕೊಡಿಯಾಲವು ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ದವಾಗಿತ್ತು.[10]

ಮೈಸೂರು ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಬೆಲ್ಲ ತಯಾರಿಕೆಯ ಆಲೆಮನೆಗಳು ಇದ್ದವು. ಜಿಲ್ಲೆಯ ಎಡತೊರೆ(ಇಂದಿನ ಕೆ.ಆರ್. ನಗರ) ಇಲ್ಲಿ ಹೆಚ್ಚಿನ ಬೆಲ್ಲ ತಯಾರಿಸುವ ಆಲೆಮನೆಗಳು ಇದ್ದವು. ಕೋಲಾರ ಜಿಲ್ಲೆಯು ಚಿನ್ನದ ಗಣಿ ಉದ್ಯಮ ಮತ್ತು ರೇಷ್ಮೆ ಕೈಗಾರಿಕೆಗಳ ಜೊತೆಯಲ್ಲಿಯೇ ಎಣ್ಣೆ ಮತ್ತು ಬೆಲ್ಲ, ಸಕ್ಕರೆ ಕೈಗಾರಿಕೆಗಳು ಪ್ರಸಿದ್ದವಾಗಿದ್ದವು. ಬೆಲ್ಲವನ್ನು ಕೋಲಾರ ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ತಯಾರಿಸುತಿದ್ದರು. ಆದರೆ ಸಕ್ಕರೆ ತಯಾರಿಕೆ ಮುಳಬಾಗಿಲು, ಶ್ರೀನಿವಾಸಪುರ, ಶಿಡ್ಲಘಟ್ಟ ಮತ್ತು ಗೌರಿಬಿದನೂರು ತಾಲ್ಲೂಕುಗಳಿಗೆ ಸೀಮಿತವಾಗಿತ್ತು. ಹಾಸನ ಜಿಲ್ಲೆಯಾದ್ಯಂತ ಸಕ್ಕರೆ ಮತ್ತು ಬೆಲ್ಲದ ಉತ್ಪಾದನೆ ನಡೆಯುತ್ತಿತ್ತು. ಈ ಜಿಲ್ಲೆ ಸಿಹಿತಿಂಡಿಗಳಿಗೂ ಪ್ರಸಿದ್ಧಿಯಾಗಿತ್ತು. ಶಿವಮೊಗ್ಗ ಜಿಲ್ಲೆಯ ವಿವಿಧ ಭಾಗಗಳಲ್ಲಿ ಬೆಲ್ಲದ ಆಲೆಮನೆಗಳು ಇದ್ದವು. ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಚೆನ್ನಗಿರಿ, ಹೊನ್ನಾಳಿ, ಸಾಗರ ತಾಲ್ಲೂಕುಗಳಲ್ಲಿ ಬೆಲ್ಲ ಮತ್ತು ಸಕ್ಕರೆ ಕಾರ್ಖಾನೆಗಳು ಇದ್ದವು. ಶಿವಮೊಗ್ಗದ ನಗರ ತಾಲ್ಲೂಕಿನ ಕುಂಸಿಯಲ್ಲಿ ಕಬ್ಬಿನ ರಸವನ್ನು ಕುದಿಸಿ ಸಕ್ಕರೆಯನ್ನು ತಯಾರಿಸುವ ಸಲುವಾಗಿ ಉಪಯೋಗಿಸುವ ದೊಡ್ಡ ದೊಡ್ಡ ಕಬ್ಬಿಣದ ತಟ್ಟೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿ ಸಂಸ್ಥಾನದ ಇತರ ಆಲೆಮನೆಗಳಿಗೆ ಪೂರೈಕೆ ಮಾಡಲಾಗುತ್ತಿತ್ತು. ಚಿತ್ರದುರ್ಗ ಜಿಲ್ಲೆಯ ಹೆಚ್ಚಿನ ಗ್ರಾಮಗಳಲ್ಲಿ ಬೆಲ್ಲದ ಆಲೆಮನೆಗಳಿದ್ದವು.[11]

**ಬೆಲ್ಲ ಮತ್ತು ಸಕ್ಕರೆ ಮೇಲೆ ತೆರಿಗೆ**

ಬೆಲ್ಲ ಮತ್ತು ಸಕ್ಕರೆ ಮೇಲೆ ಸರ್ಕಾರವು ತೆರಿಗೆಯನ್ನು ಹಾಕುತ್ತಿತ್ತು. ಮೈಸೂರು ಸಂಸ್ಥಾನದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಬೆಲ್ಲ ಮತ್ತು ಸಕ್ಕರೆ ತಯಾರಿಕೆ ಚುರುಕಾಗಿದ್ದು, ಸಂಸ್ಥಾನದ ಹೊರಗಡೆಗೂ ರಫ್ತಾಗುತ್ತಿತ್ತು. ಈ ವಸ್ತುಗಳ ಮೇಲೆ ಅನೇಕ ರೀತಿಯ ತೆರಿಗೆಗಳನ್ನು ಬೇರೆ ಬೇರೆ ವರ್ಗಗಳ ಅಡಿಯಲ್ಲಿ ಹಾಕುತ್ತಿದ್ದರು. ಇಂತಹ ಹಲವಾರು ಸುಂಕಗಳು ಬೆಲ್ಲ ಹಾಗೂ ಸಕ್ಕರೆ ತಯಾರಿಕೆಯ ಮೇಲೂ, ವ್ಯಾಪಾರದ ಮೇಲೂ ಅನಾವಶ್ಯಕವಾದ ಅಡ್ಡಿ ಆತಂಕಗಳನ್ನು ಒಡ್ಡಿತ್ತು. ಇದಲ್ಲದೆ ಕಬ್ಬು ಬೆಳೆಯುವ ಭೂ ಪ್ರದೇಶ ಉಳಿದ ಬೆಳೆಗಳ ಭೂ ಹಿಡುವಳಿಗಿಂತ ಹೆಚ್ಚಿನ ಕಂದಾಯವನ್ನು ಕೊಡುತ್ತಿತ್ತು. ಈ ದೃಷ್ಟಿಯಿಂದಲೂ ಬೆಲ್ಲ ಮತ್ತು ಸಕ್ಕರೆ ಮೇಲೆ ಹಾಕುವ ತೆರಿಗೆಗಳು ಅನ್ಯಾಯವೆಂದು

ಕಂಡುಬಂದುದು ಸಹಜ. ಲಾಭದಾಯಕ ಉತ್ಪನ್ನಕ್ಕೂ ಇದು ಅಡ್ಡಿಯಾಗಿತ್ತು. 1848ರಲ್ಲಿ ನಗರ ಮತ್ತು ಚಿತ್ರದುರ್ಗ ವಿಭಾಗಗಳಲ್ಲಿ ನಂತರ ಅಷ್ಟಗ್ರಾಮ, ನಂದಿದುರ್ಗ ವಿಭಾಗಗಳಲ್ಲೂ ಈ ತೆರಿಗೆಗಳನ್ನು ತೆಗೆದುಹಾಕಲಾಯಿತು.[12]

**ಮೈಸೂರು ಸಂಸ್ಥಾನದ ಬೆಲ್ಲ ಮತ್ತು ಸಕ್ಕರೆ ಉತ್ಪನ್ನಗಳ ತೆರಿಗೆ ಆದಾಯ ತೋರಿಸುವ ಪಟ್ಟಿ[13]**

| ವರ್ಷಗಳು | ತೆರಿಗೆ ಆದಾಯ (ರೂ. ಗಳಲ್ಲಿ) | ಷರಾ |
|---|---|---|
| 1873–74 | 136625 | |
| 1874–75 | 545700 | 409075 ಹೆಚ್ಚಳ |
| 1875–76 | 491800 | 53,900 ಕಡಿತ |
| 1876–77 | 1065487 | 573687 ಹೆಚ್ಚಳ |
| 1877–78 | 882000 | 183487 ಕಡಿತ |
| 1878–79 | 1348331 | 466331 ಹೆಚ್ಚಳ |
| 1879–80 | 795900 | 552431 ಕಡಿತ |

**ಮೈಸೂರು ಸಂಸ್ಥಾನದ ಬೆಲ್ಲದ ರಫ್ತು ವ್ಯಾಪಾರ[14]**

| ವರ್ಷಗಳು | ರಫ್ತಾದ ಮೊತ್ತ | | | ರಫ್ತಿನ ಮೌಲ್ಯ (ರೂ.ಗಳಲ್ಲಿ) |
|---|---|---|---|---|
| | ಟನ್ | ಕ್ವಾರ್ಟರ್ | ಪೌಂಡ್ | |
| 1869–70 | 2173 | 13 | 24 | 335454 |
| 1873–74 | 3448 | – | – | 425720 |
| 1875–76 | 1683 | – | – | 191870 |
| 1876–77 | 2654 | 5 | 80 | 618000 |
| 1877–78 | 1552 | 17 | 16 | 456500 |

ಬೆಲ್ಲವನ್ನು ನಂದಿದುರ್ಗ ವಿಭಾಗದಲ್ಲಿ ಹೆಚ್ಚಾಗಿ ತಯಾರಿಸಿ ಬಳ್ಳಾರಿ, ಕಣ್ಣಾನೂರಿಗೆ ರಫ್ತು ಮಾಡಲಾಗುತ್ತಿತ್ತು.

**ಮೈಸೂರು ಸಂಸ್ಥಾನದ ಸಕ್ಕರೆ ರಫ್ತು ವ್ಯಾಪಾರ**[15]

| ವರ್ಷಗಳು | ವಸ್ತುಗಳು | ರಫ್ತಾದ ಮೊತ್ತ | | | ರಫ್ತಿನ ಮೌಲ್ಯ (ರೂ.ಗಳಲ್ಲಿ) |
|---|---|---|---|---|---|
| | | ಟನ್ | ಕ್ವಾರ್ಟರ್ | ಪೌಂಡ್ | |
| 1869–70 | ಸಕ್ಕರೆ | 271 | 1 | 48 | 126000 |
| 1873–74 | ಸಕ್ಕರೆ | 1071 | 8 | 64 | 300000 |
| 1875–76 | ಸಕ್ಕರೆ | 1071 | – | – | 400000 |
| 1876–77 | ಸಕ್ಕರೆ | 335 | 7 | 16 | 156500 |
| 1877–78 | ಸಕ್ಕರೆ | 307 | 10 | – | 114800 |

1854ನೇ ವರ್ಷಗಳಲ್ಲಿ ಸಕ್ಕರೆಯನ್ನು ಹೆಚ್ಚಾಗಿ ಹೈದರಾಬಾದ್ ರಾಜ್ಯಕ್ಕೆ ರಫ್ತು ಮಾಡಲಾಗುತ್ತಿತ್ತು.[16] ಸಕ್ಕರೆಯನ್ನು ಬೆಂಗಳೂರು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಉತ್ಪಾದಿಸಿ ಕರ್ನೂಲು ಮತ್ತು ಬಳ್ಳಾರಿಗೆ ರಫ್ತು ಮಾಡಲಾಗುತ್ತಿತ್ತು. ಚಿಕ್ಕಬಳ್ಳಾಪುರದ ವ್ಯಾಪಾರಿಗಳು ಬೆಲ್ಲ ಮತ್ತು ಸಕ್ಕರೆಗೆ ಪ್ರತಿಯಾಗಿ ನಿಜಾಮನ ಸೀಮೆಯಿಂದ ಸ್ವಲ್ಪ ಹತ್ತಿ ಮತ್ತು ಉಣ್ಣೆಯನ್ನು ಪಡೆಯುವುದನ್ನು ನಿಲ್ಲಿಸಿದರು. ನಂತರ ಬೆಲ್ಲ ಮತ್ತು ಸಕ್ಕರೆಗೆ ಪ್ರತಿಯಾಗಿ ನೆರೆಹೊರೆಯಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು ನಡೆಯುತ್ತಿತ್ತು. ಟಿಪ್ಪು ಸುಲ್ತಾನ್ ನಂದಿದುರ್ಗ ಪಟ್ಟಣವನ್ನು ನಿರ್ಮಿಸಿದ ಮೇಲೆ ದೊಡ್ಡಬಳ್ಳಾಪುರದ ಬೆಲ್ಲ ಮತ್ತು ಸಕ್ಕರೆ ಸೇರಿದಂತೆ ಎಲ್ಲಾ ವರ್ತಕರು ಪಟ್ಟಣಕ್ಕೆ ಬಲವಂತದ ವಲಸೆಯಿಂದ ತೊಂದರೆಗಳನ್ನು ಎದುರಿಸಬೇಕಾಗಿತ್ತು. ಆದರೆ ಸುಲ್ತಾನನ ಮರಣದ ನಂತರ ಅವರು ಬಡತನದ ಸ್ಥಿತಿಯಲ್ಲಿ ದೊಡ್ಡಬಳ್ಳಾಪುರಕ್ಕೆ ಮರಳಿದರು. ತಾಡಪತ್ರಿಯ ವ್ಯಾಪಾರಿಗಳು ಬೆಲ್ಲ ಮತ್ತು ಸಕ್ಕರೆಗೆ ಪ್ರತಿಯಾಗಿ ಮಸ್ಲಿನ್ ಬಟ್ಟೆ, ಪೇಟ ಮತ್ತು ಕರವಸ್ತ್ರಗಳನ್ನು ತರುತಿದ್ದರು. ಈ ವ್ಯಾಪಾರಿಗಳು ಹತ್ತಿ ಮತ್ತು ಉಣ್ಣೆಯನ್ನು ಬಳ್ಳಾರಿ ಮತ್ತು ನರಗುಂದದಿಂದ ಆಮದು ಮಾಡಿಕೊಳ್ಳುತ್ತಿದ್ದರು.[17] ಬೆಂಗಳೂರು, ಕೋಲಾರ, ಗುಡಿಬಂಡಾ, ಗುತ್ತಿ, ಹಾವೇರಿಯ ವರ್ತಕರು

ಮಲೆನಾಡಿನ ಸಂತೆಗಳಲ್ಲಿ ವೀಳ್ಯದೆಲೆ ಮತ್ತು ತೆಂಗಿನಕಾಯಿಗಳನ್ನು ಕೊಳ್ಳಲು ಸಕ್ಕರೆ, ಬೆಲ್ಲ ಮತ್ತು ಬಟ್ಟೆಗಳನ್ನು ತರುತಿದ್ದರು. ಬುಕಾನನ್ ಗಮನಿಸಿದಂತೆ ಪ್ರತಿ ಜಾತ್ರೆಯಲ್ಲಿ ಸುಮಾರು 50 ರಿಂದ 100 ಬಂಡಿಗಳ ವೀಳ್ಯದೆಲೆ ಮತ್ತು ತೆಂಗಿನಕಾಯಿಗಳು ಮಾರಾಟವಾಗುತ್ತಿದ್ದವು.[18]

ವಸಾಹತುಶಾಹಿ ಮೈಸೂರು ಸಂಸ್ಥಾನವು ಕಮೀಷನರುಗಳ ನೇರ ಆಳ್ವಿಕೆಯ ಕಾಲದಲ್ಲಿ ಸಮುದ್ರದ ಸಂಪರ್ಕವಿಲ್ಲದೆ ಸುತ್ತಲೂ ಭೂಭಾಗಗಳಿಂದ ಸುತ್ತುವರೆಯಲ್ಪಟ್ಟ ಸಂಸ್ಥಾನವಾಗಿದ್ದರೂ ಕೈಗಾರಿಕೆಗಳ ಬೆಳವಣಿಗೆಯ ದೃಷ್ಟಿಯಿಂದ ಉತ್ತಮವಾದ ಸ್ಥಿತಿಗತಿಗಳನ್ನು ಹೊಂದಿದ್ದಿತು. ಮೈಸೂರು ಸಂಸ್ಥಾನದಲ್ಲಿ ಸಿಕ್ಕುವ ಎಲ್ಲಾ ರೀತಿಯ ಸಂಪನ್ಮೂಲಗಳನ್ನು ಬಳಸಿಕೊಂಡು ಜಾಣತನದಿಂದ ಬದುಕನ್ನು ಸಾಕಿಸುತ್ತಿದ್ದ ಕಾರ್ಮಿಕರು ಸಣ್ಣ ಕೈಗಾರಿಕೆಗಳು ಮತ್ತು ಇತರ ವಸ್ತು ಉತ್ಪಾದನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ವಸಾಹತುಶಾಹಿ ಮೈಸೂರು ಸಂಸ್ಥಾನದಲ್ಲಿ ಬೆಲ್ಲ ಮತ್ತು ಸಕ್ಕರೆಯನ್ನು ತಯಾರಿಸುವ ಉತ್ಪಾದಕರ ವರ್ಗವಿದ್ದಿತು. ಬೆಲ್ಲ ಮತ್ತು ಸಕ್ಕರೆ ತಯಾರಿಕೆಯು ವೈಶಿಷ್ಟಪೂರ್ಣವಾದ ಸ್ಥಾನವನ್ನು ಪಡೆದುಕೊಂಡಿತ್ತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಸಂಸ್ಥಾನದ ಬೆಲ್ಲ ಮತ್ತು ಸಕ್ಕರೆ ತಯಾರಿಕೆಯ ವೃತ್ತಿ ತೆರಿಗೆ ಮತ್ತು ವ್ಯಾಪಾರವೂ ಸಂಸ್ಥಾನದ ಪ್ರಮುಖ ಆದಾಯದ ಮೂಲವಾಗಿತ್ತು.

## ಆಧಾರಗಳು


1. ರೈಸ್ ಲೇವಿಸ್. ಬಿ ಎಲ್(1907)–ಮೈಸೂರು ಗ್ಯಾಸೆಟಿಯರ್. ಲಂಡನ್, ಸಂಪುಟ 1, ಪುಟ 547
2. ಸಾಕಿ(2004)– ಮೇಕಿಂಗ್ ಹಿಸ್ಟರಿ–ಕರ್ನಾಟಿಕಾಸ್ ಪೀಪಲ್ ಅಂಡ್ ದೇರ್ ಪಾಸ್ಟ್, ವಿಮುಕ್ತಿ ಪ್ರಕಾಶನ ಬೆಂಗಳೂರು. ಪುಟ 87
3. ವೆಂಕಟಸುಬ್ಬಾಶಾಸ್ತ್ರಿ. ಕೆ. ಎನ್.(1932) 'ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರ್ ಅಂಡರ್ ಸರ್ ಮಾರ್ಕ್ ಕಬ್ಬನ್'. ಲಂಡನ್. ಪುಟ 114–115.
4. ರೈಸ್ ಲೇವಿಸ್. ಬಿ ಎಲ್(1907).......ಪೂರ್ವೋಕ್ತ..... ಸಂಪುಟ 1, ಪುಟ 106
5. ಚಾರ್ಲ್ಸ್ ಇರ್ವಿಂಗ್ ಸ್ಮಿತ್(1854)–ಸ್ಟಾಟಿಸ್ಟಿಕಲ್ ರಿಪೋರ್ಟ್ ಆನ್ ದ ಮೈಸೂರ್. ರಾಬರ್ಟ್ ಹಾರ್ಡೀ & ಕಂ. ಎಡಿನ್‌ಬರ್ಗ್. ಪುಟ 17
6. ಮಂಡ್ಯ ಡಿಸ್ಟ್ರಿಕ್ಸ್ ಗ್ಯಾಸೆಟಿಯರ್, ಬೆಂಗಳೂರು ಪ್ರೆಸ್, 1967 ಪುಟ 250
7. ಚಾರ್ಲ್ಸ್ ಇರ್ವಿಂಗ್ ಸ್ಮಿತ್(1854) – ಸ್ಟಾಟಿಸ್ಟಿಕಲ್ ರಿಪೋರ್ಟ್ ಆನ್ ದಿ ಮೈಸೂರ್. ರಾಬರ್ಟ್ ಹಾರ್ಡೀ & ಕಂ. ಎಡಿನ್‌ಬರ್ಗ್. ಪುಟ 17
8. ಅದೇ....... ಪುಟ 19, 21
9. ರೈಸ್ ಲೇವಿಸ್. ಬಿ ಎಲ್(1907) ........ಪೂರ್ವೋಕ್ತ... ಸಂಪುಟ 1, ಪುಟ 547

10. ಮಂಡ್ಯ ಡಿಸ್ಟ್ರಿಕ್ಸ್ ಗ್ಯಾಸೆಟಿಯರ್. ಪುಟ 250

11. ಮೈಸೂರು ಆಡಳಿತ ವಾರ್ಷಿಕ ವರದಿಗಳು (1860–1881) ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ. ಬೆಂಗಳೂರು.

12. ವೆಂಕಟಸುಬ್ಬಾಶಾಸ್ತ್ರಿ. ಕೆ. ಎನ್.........ಪೂರ್ವೋಕ್ತ....... ಪುಟ 284, 285

13. ಮೈಸೂರು ಆಡಳಿತ ವಾರ್ಷಿಕ ವರದಿಗಳು (1860–1881)

14. ಮೈಸೂರು ಆಡಳಿತ ವಾರ್ಷಿಕ ವರದಿಗಳು (1860–1881)

15. ಮೈಸೂರು ಆಡಳಿತ ವಾರ್ಷಿಕ ವರದಿಗಳು (1860–1881)

16. ಚಾರ್ಲ್ಸ್ ಇರ್ವಿಂಗ್ ಸ್ಮಿತ್(1854).........ಪೂರ್ವೋಕ್ತ....... ಪುಟ 21

17. ಫ್ರಾನ್ಸಿಸ್ ಬುಕಾನನ್ (1807) ಜರ್ನೀ ಪ್ರಮ್ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್. ಲಂಡನ್. ಪುಟ 354.

18. ಅದೇ........ ಪುಟ 31–32.